

# ಕರುಣೆಯ ಮಳೆ ಸುರಿಸು

ಕಣ್ಣ ಮುಂದೆ ಅದೆಷ್ಟು ಕವಲು?
ಏನೋ ಹೇಳಲಂಜುತಿವೆ
ಮುಖ ಮುಚ್ಚಿದ ಕೂದಲು
ಮುಚ್ಚಿದ ಶಾಲೆಗೇಟು, ಅಂಗಡಿ ಮುಗ್ಗಟ್ಟು
ಬಯಲಲಿ ಕೂತು ಹರಟುವುದೇನು?
ಹಾರುವುದ, ಹಾಡುವುದ ಮರೆತ ಹಕ್ಕಿ ನಾನು

ತಪ್ಪಿಸಿಕೊಂಡು ಬಂದಿರುವ ಮರಿಯೆ,
ಮಾತು ಮರೆತವರ ಮಧ್ಯೆ
ನಿನ್ನದೇನು ತಕರಾರು?
ಕೈಗುಂಟ ಏರಿ ನಿಂತದ್ದು ಸರಿಯೆ?

ಪಾಳು ಬಿದ್ದ ಆವ ಮನೆಯಿಂದ
ತರಲಿ ಹೇಳು ಆಟಿಕೆ?
ಜಗವೇ ಸೋತುಹೋಗಿರುವಾಗ
ನಿಯಾಮಕನ ಆಟಕೆ
ಹೊರಗೆ ನೋಟ ಒಂದಾದರು
ಒಳಗೆ ಕುದಿವ ಕಡಲು ಹಲವು

ಹೆತ್ತವರನು ಕಿತ್ತುಕೊಂಡ ಹೆಮ್ಮಾರಿಯೆ
ಬಯಲಲಿ ನಿಂತ ನಾನು
ಭಯದಲಿ ನಿಂತ ಜೀವ
ಪ್ರಭೂ, ಇನ್ನಾದರು ಕರುಣಿಸು
ಕರುಣೆಯ ಹೂಮಳೆ ಸುರಿಸು

● **ಪ್ರವೀಣಕುಮಾರ ದೈವಜ್ಞಾಚಾರ್ಯ**

# ಪುಟ್ಟ ಸಂಗಾತಿ

ಗುಟ್ಟೊಂದ ಹೇಳುವೆ ಗೆಳತಿ
ಕರೊನಾ ಎಂಬ ಪಿಡುಗಿದೆಯಂತೆ
ಮಕ್ಕಳಿಗೂ ಅದು ಬರಬಹುದಂತೆ
ಶಾಲೆಗೆ ಹೋಗೋದು ಬೇಡವಂತೆ

ನೀನು ಮನೆಯಲ್ಲಿ ಕುಳಿತು
ಪಾಠ ಹೇಳಿಸಿಕೊಳ್ಳುವೆಯಂತೆ
ಪರದೆಯಲಿ ಮೂಡಲಿವೆ
ಮಿಸ್ಸು ಮೇಷ್ಟ್ರುಗಳ ಮುಖಗಳು
ಸಿಗಲಿವೆ ಅಲ್ಲಿ ಪಾಠಪ್ರವಚನಗಳು

ಮಿಕ್ಕ ಹೊತ್ತಲ್ಲಿ ಇದ್ದೇ ಇವೆ
ಮಜಾ ಕೊಡುವ ಮನೆ ಆಟಗಳು
ಎಲ್ಲಿ ಅಡಗೋಣ ಹೇಳು?
ನೀನು ನಾನು
ಮಂಚದ ಕೆಳಗೋ?
ಹಾಸಿಗೆಯ ಒಳಗೋ?

ಅಮ್ಮನಿಗೆ ಹೇಳಬೇಡ;
ಅಪ್ಪನನ್ನು ಕಾಡಬೇಡ
ಅಣ್ಣ ತಂಗಿ ಬರಲಿ ಬಿಡು;
ಗೆಳೆಯರೂ ಇರಲಿ
ಆಡೋಣ ನಾವು ಕಣ್ಣಾಮುಚ್ಚಾಲೆ
ಕೂಡಿ ನಲಿಯೋಣ ಮುದ್ದು ಬಾಲೆ

● **ಮಮತಾ ಕೆ. ಮೂರ್ತಿ**